# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 492 |
| ಸದಸ್ಯರ ಹೆಸರು | ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.03.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆಯು ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಕಳೆದ 5 ವರ್ಷಗಳಿಂದ ಈ ಗಣಿಗಾರಿಕೆಯ ಪಕ್ಷಿನೋಟವನ್ನು ನೀಡುವುದು; | ಕಳೆದ 05 ವರ್ಷಗಳಲ್ಲಿ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆಗಳಿಂದ ತೆಗೆದು ಸಾಗಾಣಿಕೆ ಮಾಡಿದ ಶಿಲೆಯ ಪ್ರಮಾಣ ಮತ್ತು ರಾಜಧನ ಸಂಗ್ರಹಣೆಯ ವಿವರ ಕೆಳಕಂಡಂತಿದೆ: (ಕೆಳಗಿನ ಕೋಷ್ಟಕ ನೋಡಿ) |
| ಇ) | ಮೇಲ್ಕಂಡ ಗಣಿಗಾರಿಕೆಯನ್ನು ಪುನಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿನ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆ ಉದ್ಯಮವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿಸಿರುವ ಉದ್ಯಮವಾಗಿರುತ್ತದೆ. ರಾಜ್ಯದಲ್ಲಿ ಉತ್ಪಾದಿಸುವ ಗ್ರಾನೈಟ್‌ನ್ನು ಹೆಚ್ಚಾಗಿ ಚೀನಾ, ತೈವಾನ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಿದ್ದು, ಗ್ರಾನೈಟ್ ರಫ್ತು ಸದರಿ ದೇಶಗಳ ಮಾರುಕಟ್ಟೆ ಆಧಾರಿತವಾಗಿರುತ್ತದೆ.<br>ಗ್ರಾನೈಟ್ ಉದ್ದಿಮೆಯನ್ನು ಪ್ರೋತ್ಸಾಹಿಸಲು ಸರ್ಕಾರದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:-<br>1. ತ್ವರಿತಗತಿಯಲ್ಲಿ ಗುತ್ತಿಗೆ ಮಂಜೂರಾತಿ ನೀಡಲು ನಿಯಮ ಸರಳೀಕರಣಗೊಳಿಸಲಾಗುತ್ತಿದೆ.<br>2. ಪರಿಸರ ಸ್ನೇಹಿ ಗಣಿಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.<br>3. ಪರಿಸರ ಸ್ನೇಹಿ ಗಣಿಗಾರಿಕೆ ನಡೆಸಲು ಗುತ್ತಿಗೆದಾರರಿಗೆ ನುರಿತ ತಜ್ಞರಿಂದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

(ಆ) ಉತ್ತರದ ಕೋಷ್ಟಕ:

| ಕ್ರ ಸಂ. | ವರ್ಷ | ಚಾಲ್ತಿಯಲ್ಲಿದ್ದ ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ | ರವಾನಿಸಿದ ಪ್ರಮಾಣ (ಕ್ಯೂ.ಮೀ.) | ಸಂಗ್ರಹವಾದ ರಾಜಧನ (ರೂ.ಕೋಟಿಗಳಲ್ಲಿ) |
|---|---|---|---|---|
| 1 | 2014–15 | 432 | 347961 | 94.67 |
| 2 | 2015–16 | 429 | 353371 | 96.00 |
| 3 | 2016–17 | 424 | 409779 | 100.52 |
| 4 | 2017–18 | 470 | 430463 | 97.81 |
| 5 | 2018–19 | 470 | 384919 | 85.86 |

--2

| | | |
|---|---|---|
| ಈ) | ಮೇಲ್ಕಂಡ ಗಣಿಗಾರಿಕೆಗೆ ಅರಣ್ಯ ಇಲಾಖೆಯು ಕೆಲ ಪ್ರಕರಣಗಳಲ್ಲಿ ವಿನಾಕಾರಣ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅರಣ್ಯ ಪ್ರದೇಶವನ್ನು ಗಣಿಗಾರಿಕೆ ಇತ್ಯಾದಿ ಅರಣ್ಯೇತರ ಉದ್ದೇಶಗಳಿಗಾಗಿ ಉಪಯೋಗಿಸಲು 1980ರ ಅರಣ್ಯ (ಸಂರಕ್ಷಣೆ) ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಿರುತ್ತದೆ. ಇದಕ್ಕಾಗಿ ಸಂಬಂಧಿತ ಉಪಯೋಗಿ ಸಂಸ್ಥೆಯು ಕೇಂದ್ರ ಸರ್ಕಾರದ **ವೆಬ್** ಪೋರ್ಟಲ್ www.parivesh.nic.in ರ ಮೂಲಕ ಆನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.<br>ಅರಣ್ಯ ಪ್ರದೇಶದಲ್ಲಿ ಅಲಂಕಾರಿಕ ಶಿಲೆಯ ಗಣಿಗಾರಿಕೆಗಾಗಿ ಮೇಲಿನಂತೆ ಅನುಮೋದನೆ ಪಡೆದ ಪ್ರಕರಣಗಳು ಯಾವುವು ಇರುವುದಿಲ್ಲ. |
| ಉ) | ಬಂದಿದ್ದಲ್ಲಿ, ಅಂತಹ ಪ್ರಕರಣಗಳ ವಿವರ ನೀಡುವುದು? | ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಐ 110 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು